ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 jsscwk@gmail.com www. jsscwkgl.org

ಕೊಳ್ಳೇಗಾಲ 9.5.2025 ರಂದು ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕನ್ನಡ ವಿಭಾಗದ ವತಿಯಿಂದ 'ರತ್ನತ್ರಯರು' (ಪಂಪ, ಪೊನ್ನ, ರನ್ನ) ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ಸಿದ್ಧಾರ್ಥನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ಕುಮಾರ್ ಬೆಳಲೆ ಅವರು ಮಾತನಾಡಿ ಕನ್ನಡ ಸಾಹಿತ್ಯಕ್ಕೆ ಪಂಪ ಪೊನ್ನ ರನ್ನರ ಕೊಡುಗೆ ಅಪಾರವಾದುದು. ರತ್ನತ್ರಯರು ಶಕ್ತಿ, ಸೌಂದರ್ಯ, ಪ್ರತಿಭೆಗೆ ಹೆಸರಾದವರು. ಇವರ ಕಾವ್ಯಗಳು ಸುಕೃತದ ಫಲವಾಗಿ ಜನಿಸಿವೆ. ಲೌಕಿಕ ಮತ್ತು ಧಾರ್ಮಿಕ ಕಾವ್ಯಗಳನ್ನು ರಚಿಸಿದ್ದಾರೆ. ಇವರ ಕಾಲವನ್ನು ವೀರಯುಗ ಎಂದು ಕರೆಯುತ್ತಾರೆ. ಇವರುಗಳ ಪ್ರಭಾವದಿಂದ ಆಧುನಿಕ ಪರಂಪರೆ ಬೆಳೆಯಲು ಸಾಧ್ಯವಾಯಿತು. ದೇಶಿ ಪರೆಂಪರೆ ಮತ್ತು ಮಾರ್ಗ ಪರಂಪರೆ ಬಗ್ಗೆ ತಿಳಿಸಿರುವುದು ಇವರ ವೈಶಿಷ್ಟ್ಯವಾಗಿದೆ. ಇವರ ಕಾವ್ಯಗಳು ಬದುಕಿನ ಪಾಠ ಕಲಿಸಿಕೊಡುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಡಾ. ಹೆಸ್.ಎಸ್.ಕೊಂಗಳಪ್ಪನವರು ಮಾತನಾಡಿ ಪ್ರಸ್ತುತ ವಿದ್ಯಾರ್ಥಿಗಳು ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ರತ್ನತ್ರಯರ ಕಾವ್ಯಗಳು ಎಲ್ಲರಿಗೂ ಮಾದರಿಯಾಗಿದೆ. ಸಾಹಿತ್ಯವನ್ನು ಓದಿ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು. ಸಾಹಿತ್ಯದಿಂದಲೇ ಜೀವನದ ಗುರಿ ಸಾಧ್ಯವಾಗುತ್ತದೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾದ ಹೆಚ್ ಎಂ ನಾಗಭೂಷಣ ಉಪಸ್ಥಿತರಿದ್ದರು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



ಮೈಸೂರಿನ ಸಿದ್ಧಾರ್ಥನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ಕುಮಾರ್ ಬೆಳಲೆ ಅವರು 'ರತ್ನತ್ರಯರು' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಪ್ರಾಚಾರ್ಯರಾದ ಡಾ. ಹೆಸ್.ಎಸ್.ಕೊಂಗಳಪ್ಪ, ಕನ್ನಡ ವಿಭಾಗದ ಮುಖ್ಯಸ್ಥರಾದ ಹೆಚ್ ಎಂ ನಾಗಭೂಷಣ